# ಶತಮಾನದ ಕ್ರೋಶಾ ಹೆಣಿಗೆ

ಸರಿಯಾಗಿ ಒಂದು ನೂರು ವರ್ಷಗಳ ಹಿಂದೆ ನಮ್ಮ ಅಜ್ಜಿ ಸಕಡೂರಿನ ಟಿ.ವಿ.ನಂಜಮ್ಮನವರು ಕ್ರೋಶಾ ಹೆಣಿಗೆಯಲ್ಲಿ ತಮ್ಮ ಹೆಸರನ್ನು ಹೆಣೆದ ಕಲಾಕೃತಿಯಿದು. ಆನೆ, ಗಿಳಿ, ನವಿಲು, ಬೆಕ್ಕು ಮೊದಲಾದ ಚಿತ್ರಗಳು ಅವರ ಪ್ರಾಣಿ ಪಕ್ಷಿಗಳ ಪ್ರೇಮವನ್ನು ತೋರಿಸುತ್ತದೆ. ಅವರ ಮಗಳು ಜಯಮ್ಮನವರು ಈ ಹೆಣಿಗೆಯನ್ನು ಅತ್ಯಂತ ಜೋಪಾನವಾಗಿ ಇಟ್ಟುಕೊಂಡಿದ್ದರು. ನಂತರ ನನ್ನ ಅಮ್ಮ ಶಾರದಾದೇವಿ ಅದನ್ನು ಕಾಪಾಡಿಕೊಂಡು ಬಂದರು. ಈಗ ನಾನು ಇದನ್ನು ಕಾಯ್ದಿಟ್ಟುಕೊಂಡಿದ್ದೇನೆ.

**■ ಮೀನಾ ನಾರಾಯಣ ಸ್ವಾಮಿ, ಬೆಂಗಳೂರು**






# ಗೋಕಾಕರ ಕಂಚಿನ ಪುತ್ಥಳಿ

ಖ್ಯಾತ ಪ್ರಾಧ್ಯಾಪಕರು, ಸಾಹಿತಿಗಳು ಮತ್ತು ಸಂಶೋಧಕರಾಗಿದ್ದ ಡಾ. ವಿ. ಕೃ. ಗೋಕಾಕ ಅವರು ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಕನ್ನಡದಲ್ಲೇ ಇರಬೇಕೆಂದು ವರದಿ ಸಲ್ಲಿಸಿದ್ದರು. ಗೋಕಾಕ ವರದಿ ಅನುಷ್ಠಾನಕ್ಕೆ ತರಬೇಕೆಂದು ರಾಜ್ಯಾದ್ಯಂತ ಚಳವಳಿ ನಡೆಯಿತು. ಇಂತಹ ಡಾ. ವಿ. ಕೃ. ಗೋಕಾಕ ಅವರ ಜ್ಞಾಪಕಾರ್ಥ ಒಂದು ಕಂಚಿನ ಪುತ್ಥಳಿಯನ್ನು ಧಾರವಾಡದ ಪಾಲಿಕೆ ಕಚೇರಿಯ ಹಿಂಭಾಗದಲ್ಲಿರುವ ಡಾ. ಸುಧಾಮೂರ್ತಿ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಅಲ್ಲದೆ ಅವರ ಹಸ್ತಾಕ್ಷರದಲ್ಲಿರುವ ಕೆಲವು ಪತ್ರಗಳು ಮತ್ತು ಅವರಿಗೆ ಸಂದ ಕೆಲವು ಪ್ರಶಸ್ತಿಗಳನ್ನು ಕೂಡಾ ಇರಿಸಲಾಗಿದೆ.

**■ ಪಂಪಾಪತಿ ಹಿರೇಮಠ, ಧಾರವಾಡ**



# ಗೋಡೆ ರಂಗೋಲಿಯ ಅಂದ ಚೆಂದ..

ಹಳೆ ಸಾಂಪ್ರದಾಯಿಕ ಮನೆಗಳ ಗೋಡೆಗಳಲ್ಲಿ ಕಾಣಿಸುವ ರಂಗೋಲಿಗಳು ಚಿತ್ತಾಕರ್ಷಕವಾಗಿರುತ್ತವೆ. ಹಿಂದೆಲ್ಲಾ ಇಂತಹ ಸಾಂಪ್ರದಾಯಿಕ ಮನೆಗಳಲ್ಲಿ 30ಕ್ಕಿಂತಲೂ ಜಾಸ್ತಿ ಜನರಿರುತ್ತಿದ್ದರು. ಗೋಡೆ ಮೇಲೆ ರಂಗೋಲಿ ಬಳಿಯುವ ಉಮೇದು ಮನೆಯ ಪ್ರತೀ ಹೆಂಗಸರಿಗೂ ಇರುತ್ತಿತ್ತು. ಆದರೆ ಕ್ರಮೇಣ ಈ ಮನೆಗಳೂ ಹೊಸತಾಗಿ ನವೀಕರಣಗೊಂಡೋ ಅಥವಾ ಕಾಲ ಗರ್ಭದಲ್ಲಿ ಲೀನವಾಗಿಯೋ ಹೋದ ಮೇಲೆ, ಈ ರಂಗೋಲಿಯ ಚಿತ್ತಾರವೂ ನಮ್ಮ ಮನಸ್ಸಿನಿಂದ ಜಾರುತ್ತಲೇ ಇದೆ.

ಇತ್ತೀಚೆಗೆ ಕಾಡಿನಂಚಿನ ಊರಿಗೆ ಹೋಗಿದ್ದಾಗ ಅಲ್ಲಿನ ಸಾಂಪ್ರದಾಯಿಕ ಮನೆಯೊಂದರ ಗೋಡೆ ಮೇಲೆ ಇಂತಹ ರಂಗೋಲಿಗಳು ಮಿನುಗುತ್ತಿದ್ದವು. ಚೌಕಿ ಮನೆಯ ಅಂಗಳದಲ್ಲಿ ಮಳೆ ಬಿದ್ದರೂ ಅಳಿಸಿ ಹೋಗದಂತೆ ಮೂಡಿದ್ದ ಆ ರಂಗೋಲಿಯ ಚೆಂದ ನೋಡಿಯೇ ಸವಿಯಬೇಕು.

**■ ಪ್ರಸಾದ್ ಶೆಣೈ ಆರ್.ಕೆ., ಕಾರ್ಕಳ**